ಹೇಳಿದ್ದೇನೆ. ಸ್ವಲ್ಪ problem ಇತ್ತು. Land Acquisition Officer ರವರು ಇರಲಿಲ್ಲ. ಅದನ್ನು Assistant Commissioner ರವರಿಗೆ ವಹಿಸಿದ್ದೇವೆ Treasury ಗೆ ಹೋಗಿದೆ. ಬಿಲ್ ಬಂದಿದೆ. ಚೆಕ್‌ಗಳು ರೆಡಿ ಇವೆ. ಕೊಡುತ್ತಿದ್ದೇವೆ. ಯಾವುದೇ ವಿಳಂಬವಾಗದ ರೀತಿ ನೋಡಿಕೊಳ್ಳುತ್ತೇವೆ.

ಶ್ರೀ ಅಶೋಕ್ ಖೇಣಿ : ಮಾನ್ಯ ಅಧ್ಯಕ್ಷರೆ, Compensation ಬಗ್ಗೆ ಒಂದು ನಿಮಿಷ ಮಾತನಾಡುತ್ತೇನೆ.

January 16, 2013 ರಲ್ಲಿ ಸರ್ಕಾರ High Court ನಲ್ಲಿ Chief Justice ಅವರ ಮುಂದೆ ಕಾರಂಜಾ ಯೋಜನೆ ಸಲುವಾಗಿ within three months Rs.55 crores compensation ಕೊಡುತ್ತೇವೆಂದು commitment ಕೊಟ್ಟಿತು. Three Months, ಆಯಿತು one year four months ಆಯಿತು. ಇದುವರೆಗೂ compensation ಕೊಟ್ಟಿರುವುದಿಲ್ಲ. ಅದರ ಬಗ್ಗೆ ರೈತರುಗಳು ಈಗ contempt petition ಹಾಕಿದ್ದಾರೆ. High Court has served a contempt notice, ಇವತ್ತು hearing ಆಗುತ್ತಿದೆ. The Chief Justice has asked, Why should not these officers be taken to jail for disobeying the High Court? ಎಂದು. ಅದರ ಬಗ್ಗೆ ಮಾನ್ಯ ಸಚಿವರು ಹೇಳುತ್ತಿಲ್ಲ, 55 ಕೋಟಿ ರೂಪಾಯಿಗಳಿಗೆ ಸಂಬಂಧಿಸಿದಂತೆ ತಾವು Commit ಮಾಡಿ ಕೊಡುತ್ತೇವೆಂದು ಹೇಳಿದ್ದು ಏತಕ್ಕಾಗಿ ಕೊಟ್ಟಿಲ್ಲವೆಂದು ಈ ಬಗ್ಗೆ ಅವರು ಸ್ವಲ್ಪ ಹೇಳಬೇಕು.

ಅಧ್ಯಕ್ಷರು : O.K.

ಶ್ರೀ ವಿ.ಶ್ರೀನಿವಾಸ ಪ್ರಸಾದ್: Commitment ಇದೆ. ನಾನು ಈ ಬಗ್ಗೆ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಈ ಬಗ್ಗೆ ನಮ್ಮ ಇಲಾಖೆಯಲ್ಲಿಯೂ ಮಾತನಾಡಿ ನಮ್ಮ Commitment ಏನಿದೆ High Court ನವರು ಏನು ಕೊಟ್ಟಿದ್ದಾರೆ ಅದನ್ನು ನಾವು ಮಾಡಿಕೊಡುತ್ತೇವೆ.

ಅಧ್ಯಕ್ಷರು : O.K.

ತುಂಗಭದ್ರಾ ಮಂಡಳಿ ಸದಸ್ಯರ ನೇಮಕಾತಿ ಹಾಗೂ ರದ್ದಿಯಾತಿ

04(63) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ):– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

(ಅ) ತುಂಗಭದ್ರಾ ಮಂಡಳಿ (T.B.Board) ಈಗ ಅಸ್ತಿತ್ವದಲ್ಲಿದೆಯೇ ; (ಮಂಡಳಿ ರಚನೆಯ ಪೂರ್ಣ ವಿವರ ನೀಡುವುದು)

(ಆ) ಡಿಸೆಂಬರ್ 2010ರಲ್ಲಿ ಕೃಷ್ಣಾ ನೀರಿನ ಹಂಚಿಕೆ ನ್ಯಾಯಾಧಿಕರಣ–2 ಐತೀರ್ಪಿನಲ್ಲಿ ತುಂಗಭದ್ರಾ ಮಂಡಳಿಯನ್ನು ರದ್ದು ಮಾಡಲು ನ್ಯಾಯಾಧೀಕರಣ ಸೂಚಿಸಿದೆಯೇ; ಹಾಗಿದ್ದಲ್ಲಿ, ತುಂಗಭದ್ರಾ ಮಂಡಳಿಯನ್ನು ಯಾವಾಗ ರದ್ದು ಮಾಡಲಾಗುವುದು ;

(ಇ) 2014ರ ಆಂಧ್ರ ಪ್ರದೇಶ ರಾಜ್ಯ ವಿಭಜನಾ ಕಾಯ್ದೆಯಲ್ಲಿ ತುಂಗಭದ್ರಾ ಮಂಡಳಿಯನ್ನು ಮುಂದುವರಿಸಲು ಅನುವು ಮಾಡಿಕೊಡಲಾಗಿದೆಯೇ ; ಹಾಗಿದ್ದಲ್ಲಿ, ತುಂಗಭದ್ರಾ ಮಂಡಳಿಯನ್ನು ಮುಂದುವರಿಸಿದಲ್ಲಿ ಕೃಷ್ಣಾ ನದಿ ನೀರಿನ ಹಂಚಿಕೆ ನ್ಯಾಯಾಧಿಕರಣ–2ರ ಆದೇಶ ಉಲ್ಲಂಘನೆ ಆಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ನ್ಯಾಯಾಧಿಕರಣ–2ರ ಆದೇಶದಂತೆ ತುಂಗಭದ್ರಾ ಮಂಡಳಿ (T.B.Board) ರದ್ದು ಮಾಡಲು ಕೇಂದ್ರ ಸರ್ಕಾರಕ್ಕೆ ಯಾವಾಗ ಕೋರಲಾಗಿರುತ್ತದೆ ಹಾಗೂ ಕ್ರಮ ತೆಗೆದುಕೊಳ್ಳಲಾಗುತ್ತಿದೆಯೇ ?

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು):–

(ಅ) ತುಂಗಭದ್ರಾ ಮಂಡಳಿಯು ಪ್ರಸ್ತುತ ಅಸ್ತಿತ್ವದಲ್ಲಿರುತ್ತದೆ.

1953ರಲ್ಲಿ ಅನುಷ್ಠಾನಗೊಂಡ "ಆಂಧ್ರ ಪ್ರದೇಶ ಕಾಯಿದೆ" ಯ ಸೆಕ್ಷನ್ 66ರ ಉಪ–ಸೆಕ್ಷನ್ (1) ರಡಿಯಲ್ಲಿ ಅಧಿಕಾರ ಚಲಾಯಿಸಿ ಕೇಂದ್ರ ಸರ್ಕಾರದ ದಿನಾಂಕ:29–09–1953 ರ ಅಧಿಸೂಚನೆಯಲ್ಲಿ ದಿನಾಂಕ:01–10–1953ರಿಂದ ಜಾರಿಗೆ ಬರುವಂತೆ ತುಂಗಭದ್ರಾ ಮಂಡಳಿಯನ್ನು ಸ್ಥಾಪಿಸಿ, ತುಂಗಭದ್ರಾ ಯೋಜನೆಗೆ ಸಂಬಂಧಿಸಿದಂತೆ ಆಂಧ್ರ ಪ್ರದೇಶ ಮತ್ತು ಮೈಸೂರು ರಾಜ್ಯಗಳ ಸಾಮಾನ್ಯ ಕಾಮಗಾರಿ/ ವಿಷಯಗಳ ಬಗ್ಗೆ ಕಾರ್ಯನಿರ್ವಹಿಸಲು ಅಧಿಕಾರ ನೀಡಲಾಯಿತು. ಸದರಿ ಮಂಡಳಿಯನ್ನು ಸೆಕ್ಷನ್.66ರ ಉಪಸೆಕ್ಷನ್ (4)ರಡಿಯಲ್ಲಿ ದಿನಾಂಕ: 10–03–1955ರ ಕೇಂದ್ರ ಸರ್ಕಾರದ ಅಧಿಸೂಚನೆಯಲ್ಲಿ ದಿನಾಂಕ: 15–03–1955 ರಿಂದ ಜಾರಿಗೆ ಬರುವಂತೆ ಪುನರ್ ರಚಿಸಲಾಗಿದೆ.

(ಆ), (ಇ) & (ಈ) ಸಂವಿಧಾನದ ಆರ್ಟಿಕಲ್ 4 ರೊಂದಿಗೆ ಆರ್ಟಿಕಲ್ 3 ರಡಿಯಲ್ಲಿ ಸಂಸತ್ ಹೊರಡಿಸಿರುವ ಆಂಧ್ರ ಪ್ರದೇಶ ಪುನರ್ವಿಂಗಡಣೆ ಕಾಯಿದೆ 2014ರ ಸೆಕ್ಷನ್ 91 ರಲ್ಲಿ ಈ ಕೆಳಕಂಡಂತೆ ಸೂಚಿಸಿದೆ:–

"91. (1) The Government of the successor States of Andhra Pradesh and Telengana shall re place the existing State of Andhra Pradesh on the Tungabhadra Board.

(2) The Tungabhadra Board shall continue to monitor the release of water to High Level Canal, Low Level Canal and Rajolibanda Diversion Scheme".

ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ – II ರ ಅಂತಿಮ ಆದೇಶದ (ಅಂತರ ರಾಜ್ಯ ನದಿ ನೀರು ವಿವಾದ ಕಾಯಿದೆ, 1956ರ ಸೆಕ್ಷನ್ 5(3) ರಡಿಯಲ್ಲಿ ಮಾರ್ಪಡಿಸಿದಂತೆ) ಕ್ಲಾಸ್ XIV ರಲ್ಲಿ ಈ ಕೆಳಕಂಡಂತೆ ಸೂಚಿಸಿದೆ:–

"That it is hereby provided that on the constitution of the 'Krishna Water Decision - Implementation Board' the administrative control and regulation over Tungabhadra Dam and its Reservoir including Head Regulators of all the canal systems both on the left and the right sides and all its gates as well as the administrative control of Rajolibanda Diversion Scheme shall vest in the Board and the notifications dated 29th September, 1953 and the 10th March, 1955 issued under Section 66(1) and (4) respectively of the Andhra State Act, 1953 shall to cease be operative."

2014ರ ಕಾಯಿದೆಯ ಸೆಕ್ಷನ್ 91ರಲ್ಲಿನ ಅವಕಾಶಗಳು ಹಾಗೂ ಇತರೆ ಅವಕಾಶಗಳ ವ್ಯಾಖ್ಯಾನ ಮತ್ತು ಸಂವಿಧಾನಿಕತೆಯ ಬಗ್ಗೆ ಕೃಷ್ಣಾ ಜಲ ವಿವಾದದಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಕಾನೂನು ತಂಡವು ಪರಿಗಣಿಸುತ್ತಿದೆ. ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರವು ಸಧ್ಯದಲ್ಲಿಯೇ ಕ್ರಮ ಕೈಗೊಳ್ಳುವ ಬಗ್ಗೆ ನಿರ್ಧರಿಸಲಿದೆ.

ಶ್ರೀ ಬಸವರಾಜ ರಾಯರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ. . . .

ಅಧ್ಯಕ್ಷರು : ಮಾನ್ಯ ರಾಯರೆಡ್ಡಿಯವರೆ, ಇದನ್ನು ಏತಕ್ಕಾಗಿ ಚರ್ಚೆಗೆ ಹಾಕಿಕೊಳ್ಳಬಾರದು.

ಶ್ರೀ ಬಸವರಾಜ ರಾಯರೆಡ್ಡಿ : ತಾವು ಹಾಕಿಕೊಳ್ಳಬಹುದು. ಆದರೂ ಸಹ ನಾನು ಈ ಬಗ್ಗೆ ಮಾತನಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಇದನ್ನು ಚರ್ಚೆಗೆ ಹಾಕಿಕೊಳ್ಳೋಣ.

ಶ್ರೀ ಬಸವರಾಜ ರಾಯರೆಡ್ಡಿ : ತಾವು ಇದನ್ನು ಚರ್ಚೆಗೆ ಹಾಕಿಕೊಂಡರೆ ನಾನು ಸ್ವಾಗತಿಸುತ್ತೇನೆ. ಇದರಲ್ಲಿ ಕೆಲವೊಂದು ಉಪ ಪ್ರಶ್ನೆಗಳು ಇವೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಬೇಕಾಗುತ್ತದೆ. ಈ ಪ್ರಶ್ನೆಯು ಬಹಳ ಪ್ರಮುಖವಾದುದು ಮತ್ತು ರಾಜ್ಯಕ್ಕೆ ಸಂಬಂಧಪಟ್ಟಿದ್ದಾಗಿರುತ್ತದೆ. ನಾನು ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರವನ್ನು

ನೋಡಿದ್ದೇನೆ. ಅವರು ಕೊಟ್ಟಿರುವ ಉತ್ತರದಲ್ಲಿ Karnataka Water Dispute Tribunal-2. Tribunal Judgement ನಲ್ಲಿ ಸ್ಪಷ್ಟವಾಗಿ ನ್ಯಾಯಾಧಿಕರಣವು ಆದೇಶವನ್ನು ಮಾಡಿದೆ. ಮಾನ್ಯ ಅಧ್ಯಕ್ಷರೆ ಅದನ್ನು ನಾನು ಈಗ ಓದುತ್ತೇನೆ. "The Krishna Water Decision-Implement Board, the administrative control and regulation over Tungabhadra Dam and its Reservoir including Head Regulators of all the canal system both on the left and the right side and all its gates, as well as administrative control. . . .

ಅಧ್ಯಕ್ಷರು : ಮಾನ್ಯ ರಾಯರೆಡ್ಡಿಯವರೆ, ನಾನು ಒಂದು ನಿಮಿಷ ಹೇಳುತ್ತೇನೆ ತಾವು ಕೇಳಿ. ಈ ಬಗ್ಗೆ ತಾವು ಪ್ರಶ್ನೆ ಮುಖಾಂತರ ಸಮರ್ಪಕವಾಗಿ ಉತ್ತರವನ್ನು ಪಡೆಯುವುದು ಕಷ್ಟ. ಈ ಬಗ್ಗೆ ತಾವು ಚರ್ಚೆಗೆ ವಹಿಸಿಕೊಂಡು ಚರ್ಚೆ ಮಾಡಿ. ಏನಾದರೂ ವ್ಯತ್ಯಾಸಗಳು ಇದ್ದರೆ ಮಾನ್ಯ ಸಚಿವರಿಂದ ಉತ್ತರವನ್ನು ಪಡೆದುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಈ ಬಗ್ಗೆ ಒಪ್ಪಿಸಿಕೊಂಡಿದ್ದೇನೆ. ನಾನು ಈ ಬಗ್ಗೆ ಪ್ರಮುಖವಾಗಿ quick ಆಗಿ ಕೇಳುತ್ತಿದ್ದೇನೆ. ಅದರ ಬಗ್ಗೆ ಮಾನ್ಯ ಸಚಿವರು ಚಿಂತನೆಯನ್ನು ಮಾಡಲಿ. ನಾನು ಇಲ್ಲಿ ಹೇಳುತ್ತಿರುವುದು, KWT-2 ನಲ್ಲಿ ತುಂಗಭದ್ರಾ ಮಂಡಳಿಯನ್ನು ರದ್ದು ಮಾಡಿ, ಅದನ್ನು Krishna Implementation Board ನಲ್ಲಿ merge ಮಾಡಬೇಕೆಂದು ಸ್ಪಷ್ಟವಾಗಿ ಹೇಳಿದ್ದಾರೆ. Further ಅವರು ಏನು ಹೇಳಿದ್ದಾರೆಂದರೆ, ಅಲ್ಲಿರುವ staff ಎಲ್ಲರನ್ನೂ ಕೂಡ. . . . .

ಅಧ್ಯಕ್ಷರು : ಅವೆಲ್ಲವೂ ಬೇಡ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ತಾವು ಒಂದು ನಿಮಿಷ allow ಮಾಡಿಕೊಡಿ. ಈ ಒಂದು ಬೋರ್ಡ್‌ನಲ್ಲಿ ಕೆಲಸ ಮಾಡುವಂತಹ ನೌಕರರನ್ನು ಅದರಲ್ಲಿ merge ಮಾಡಬೇಕೆಂದು ಹೇಳಿದ್ದಾರೆ. ಆದರೆ ಏನಾಗಿದೆ ಎಂದರೆ, The Andhra Pradesh Reorganization Act 2014, 1st March, 2014ನಲ್ಲಿ Act pass ಆಗಿದೆ. ಆಂಧ್ರ ಪ್ರದೇಶ ಮತ್ತು ತೆಲಂಗಾಣ ಪುನರ್ ವಿಂಗಡಣೆಯಲ್ಲಿ ಆಗಿದೆ. ಅದರಲ್ಲಿ ಸ್ಪಷ್ಟವಾಗಿ Section 91 sub-section 1&2 ನಲ್ಲಿ ಅವರು ಏನು ಹೇಳಿದ್ದಾರೆಂದರೆ, Section 91(1); The successor of State of Andhra Pradesh and Telangana shall replace the existing States of Andhra Pradesh on the Tungabhadra Board. 91(2); The

Tungabhadra Board shall cantinue to monitor the release of water to High Level Canal, Low Level Canal and Rajolibanda Diversion Scheme. ಅದು ಸ್ಪಷ್ಟವಾಗಿ Parliament ನಲ್ಲಿ Act pass ಆಗಿದೆ.

ಅಧ್ಯಕ್ಷರು : ನಿಮ್ಮದು ಏನು ಪ್ರಶ್ನೆ ಇದೆ ಅದನ್ನು ಕೇಳಿ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ಆ ಬಗ್ಗೆಯೇ ಹೇಳುತ್ತೇನೆ. ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಏನು ಹೇಳಿದ್ದಾರೆಂದರೆ, ಇದರ ಬಗ್ಗೆ ನಾವು ಸ್ಟಡಿ ಮಾಡುತ್ತಿದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ ಅದು ಸ್ವಾಗತಾರ್ಹ. ಇದು ಅಷ್ಟಾದರೂ ಆಗುವುದಿಲ್ಲ. ಇದರಿಂದ ರಾಜ್ಯಕ್ಕೆ ಮಹಾ ಅನ್ಯಾಯವಾಗುತ್ತದೆ. ಅದಕ್ಕಾಗಿ ನನ್ನ demand ಇಷ್ಟೆ. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಸರ್ವಪಕ್ಷಗಳ ಸಭೆಯನ್ನು ಕರೆದು ದೆಹಲಿಗೆ ನಿಯೋಗವನ್ನು ಕರೆದುಕೊಂಡು ಹೋಗಿ ಮಾನ್ಯ ಪ್ರಧಾನ ಮಂತ್ರಿಗಳನ್ನು ಮತ್ತು Water Resources Minister ಅವರನ್ನು ಭೇಟಿ ಆಗಿ ಈ Act ಅನ್ನು repeal ಮಾಡಬೇಕಾಗುತ್ತದೆ. ಇಲ್ಲದೆ ಇದ್ದರೆ ಇದರಿಂದ ನಮಗೆ ಮರಣ ಶಾಸನವಾಗುತ್ತದೆ. ಅದಕ್ಕಾಗಿ ಸರ್ಕಾರವು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ವೈ.ಎಸ್.ವಿ.ದತ್ತ : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ರಾಯರೆಡ್ಡಿಯವರು ಎತ್ತಿರುವಂತಹ ಪ್ರಶ್ನೆ ಬಹಳ ಗಂಭೀರವಾಗಿದೆ. ಆದ್ದರಿಂದ ಇದು ಚುಕ್ಕೆ ಗುರುತಿನ ಪ್ರಶ್ನೆಯೊಳಗಡೆ ಉತ್ತರ ಕೊಡುವುದು ಆಗಬಾರದು.

ಅಧ್ಯಕ್ಷರು : ಅದಕ್ಕಾಗಿಯೇ ನಾನು ಹೇಳಿರುವುದು.

ಶ್ರೀ ವೈ.ಎಸ್.ವಿ.ದತ್ತ : ಈ ಬಗ್ಗೆ ನಾವೂ ಸಹ ಬೆಳಕು ಚೆಲ್ಲುವಂತಹ ಅನೇಕ ಅಂಶಗಳು ಇವೆ. ಕಾವೇರಿ ಸಮಸ್ಯೆಯು ಹೇಗೆ ಇವತ್ತಿನ ದಿವಸ ಜಟಿಲವಾಗುತ್ತಿದೆ, ನಾಳೆ ದಿವಸ ಇದು ಕೂಡ ಹೊಸ ಆಂಧ್ರ ಮತ್ತು ತೆಲಂಗಾಣ ಸಂದರ್ಭದಲ್ಲಿ ಬಹಳ ಗಂಭೀರವಾಗುತ್ತದೆ. ಅದಕ್ಕಾಗಿ ಈ ಬಗ್ಗೆ ವಿಶೇಷವಾಗಿ ಚರ್ಚೆಯಾಗಬೇಕಾಗಿದೆ.

ಅಧ್ಯಕ್ಷರು : ಒಂದು ನಿಮಿಷ ತಾಳಿ. ಬೇಡಿಕೆಯ ಮೇಲೆ ಚರ್ಚೆ ನಡೆಯುತ್ತಿದೆ. ಬೇಕಾದರೆ ನೀರಾವರಿಯ ಬಗ್ಗೆ ಚರ್ಚೆಯನ್ನು ಬೇಗ ಹಾಕಿಕೊಳ್ಳೋಣ. ಈ ಬಗ್ಗೆ ದಿವಸವೆಲ್ಲಾ ಚರ್ಚೆ ಮಾಡಿ ಮಾನ್ಯ ಸಚಿವರು ಸಮರ್ಪಕವಾಗಿ ಉತ್ತರ ಹೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಈ ಬಗ್ಗೆ detail ಆಗಿ ಚರ್ಚೆಯಾಗಲಿ ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಮಾನ್ಯ ಸಚಿವರು ಕಾನೂನು ಪಂಡಿತರ ಜೊತೆಯಲ್ಲಿ ಚರ್ಚೆ

ಮಾಡಿಕೊಂಡು ಈ ಬಗ್ಗೆ ವಿಚಾರ ಮಾಡುತ್ತೇನೆಂದು ಉತ್ತರದಲ್ಲಿ ಹೇಳಿದ್ದಾರೆ, Tribunal order ಬಂದು award ಆಗಿ ಎಷ್ಟು ದಿವಸಗಳಾಗಿದೆ ? ನೀವು ಇದುವರೆಗೂ discussion ಮಾಡಿಲ್ಲವೇ ?

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್ : ನಾವು ಕಾನೂನು ತಜ್ಞರ ಜೊತೆಯಲ್ಲಿ ಚರ್ಚೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಅದು ಇಲ್ಲಿಯವರೆಗೂ ಏತಕ್ಕಾಗಿ ಆಗಲಿಲ್ಲವೆಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರೆ, ತಾವು ಅಷ್ಟಕ್ಕೆ ಉತ್ತರವನ್ನು ಕೊಡಿ.

ಶ್ರೀ ಎಂ.ಬಿ.ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಕೃಷ್ಣಾ ನ್ಯಾಯಾಧಿಕರಣ ತೀರ್ಪು–2ರ ಮೇಲೆ ಸ್ಪಷ್ಟೀಕರಣದ ಬಗ್ಗೆಯೂ ಕೂಡ ಅರ್ಜಿ ಬಂದಿದೆ. ಅದರ ಮೇಲೆ ನಾವು ಮತ್ತು ಆಂಧ್ರದವರು ಈಗಾಗಲೇ Supreme Court ನಲ್ಲಿ appeal file ಮಾಡಿದ್ದೇವೆ. ಇದಕ್ಕಿಂತಲೂ ಮುಂಚಿತವಾಗಿ ಇದು notification ಆಗಬಾರದು ಎಂದು ಈ ಬಗ್ಗೆ Supreme Court ನಲ್ಲಿ stay ಕೂಡ ಇದೆ.ಆ stay vacate ಆದ ಮೇಲೆ ಇವತ್ತಿನ ದಿವಸ ನ್ಯಾಯಾಧಿಕರಣದ ತೀರ್ಪು ಏನಿದೆ. KWT-2 ಬಗ್ಗೆ Brijesh kumar award ಏನಿದೆ, ಅದು force ಗೆ ಬರುತ್ತದೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀ ರಾಯರೆಡ್ಡಿಯವರು ಕೇಳಿರುವಂತಹ ಪ್ರಶ್ನೆ ಏನಿದೆ, Andhra Reorganization ಪುನರ್ ವಿಂಗಡಣೆಯಾಗಿ this is a matter between two successive states. ಇದು ಎರಡು ರಾಜ್ಯಗಳ ಮಧ್ಯ ಇರುವಂತಹದ್ದು ಆಗಿದೆ. ಆ notification ನೋಡಿದಾಗ ನಾವು ಅನೇಕ ಕಡೆಗಳಲ್ಲಿ ಅವರು ಹೇಳಿಕೊಂಡು ಬಂದಿದ್ದಾರೆ. Between the two successive states ಎಂದು ಆಮೇಲೆ ಅವರು ಅದನ್ನು reiterate ಮಾಡಿಕೊಂಡು ಬಂದಿದ್ದಾರೆ. ನಮ್ಮ Tribunal Award ಇದೆ, River Act ಏನಿದೆ, ಅದರ ಬಗ್ಗೆ subject-2 ಎಂದು ಹೇಳಿಕೊಂಡು ಬಂದಿದ್ದಾರೆ. ಆದಾಗ್ಯೂ ಕೂಡ ನಾವು ಜಾಗ್ರತೆಯಿಂದ ಇವತ್ತಿನ ದಿವಸ ಇಲ್ಲಿ Act ಅನ್ನು ಮಾಡಬೇಕಾಗಿದೆ. ನಾವು ಕಾನೂನು ತಜ್ಞರ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಮೊನ್ನೆಯೂ ಕೂಡ, ಮಾನ್ಯ ಹೆಚ್.ಕೆ.ಪಾಟೀಲ್‌ರು ಮತ್ತು ನಾವು ಸೇರಿ ಈ ಬಗ್ಗೆ ಚರ್ಚೆ ಮಾಡಿದ್ದೇವೆ. ಇದಲ್ಲದೆ Schedule-11 ನಲ್ಲಿಯೂ ಕೂಡ ಇದನ್ನು ನಾನು ಓದಿ ಹೇಳಬೇಕಾದರೆ ಸಾಕಷ್ಟು ಸಮಯವಾಗುತ್ತದೆ. Schedule-11ನಲ್ಲಿ Principles governing the function of river management Board. ಅಲ್ಲಿಯೂ ಕೂಡ reiterate ಮಾಡಿದ್ದಾರೆ. ಈಗಾಗಲೇ ಈ ಬಗ್ಗೆ Supreme Court ಕೇಸ್‌ನಲ್ಲಿ Judgement ಗಳು ಇವೆ. ಈ ಬಗ್ಗೆ ವಿಶೇಷವಾಗಿ in the matter of Cauvery Water Disputes Tribunal the tribunal.....

ಅಧ್ಯಕ್ಷರು : It is a major issue. ಇಲ್ಲಿ ಸ್ವಲ್ಪ complicated ಇದೆ. ಅದಕೋಸ್ಕರವಾಗಿ ಈ ಬಗ್ಗೆ ವಿಶೇಷವಾದಂತಹ ರೀತಿಯಲ್ಲಿ ಚರ್ಚೆ ಮಾಡಿದರೆ ಅನುಕೂಲವಾಗುತ್ತದೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು : ಮಾನ್ಯ ರಾಯರೆಡ್ಡಿಯವರೇ, ತಾವು ನಾನು ಹೇಳುವುದನ್ನು ಕೇಳಿ. ಒಂದೊಂದು ಪ್ರಶ್ನೆಗೆ ಒಂದೊಂದು ಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಕೊಡುವುದಕ್ಕೆ ಆಗುತ್ತದೆಯೇ ?

ಶ್ರೀ ಎಂ.ಬಿ.ಪಾಟೀಲ್ : ನಾವು ಇಷ್ಟು ಇದ್ದಾಗ್ಯೂ ಕೂಡ ನಾವು ಒಂದು detailed statement ಅನ್ನು ಕಾನೂನಿನ ಬಗ್ಗೆ ನಾವು ಏನು discuss ಮಾಡಿದ್ದೇವೆ, ಅದನ್ನು ನಾವು ಈ ಒಂದು ಸಭೆಯ ಮುಂದೆ ತರುತ್ತೇವೆ. ಇದಾದ ಮೇಲೆ ಅವಶ್ಯಕತೆ ಇದ್ದರೆ ಉಳಿದಂತಹ ವಿಷಯಗಳು ಬರುತ್ತದೆ. Delegation ಹೋಗುವುದಾಗಲಿ, ನಾವು ಆ ಬಗ್ಗೆ ಅಪೀಲ್ ಫೈಲ್ ಮಾಡುವುದಾಗಲಿ ಮಾಡುತ್ತೇವೆ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಸಭಾಧ್ಯಕ್ಷರೆ, ಸದನದ ಒಳಗಡೆಯೇ. . .

ಶ್ರೀ ಬಸವರಾಜ ರಾಯರೆಡ್ಡಿ : ಕರ್ನಾಟಕದ ರಾಜ್ಯ ಸರ್ಕಾರವು ಈ ಒಂದು Act ಅನ್ನು ಗೆಜೆಟ್ ಮಾಡುವ ಮೊದಲು objection raise ಮಾಡಿದ್ದಾರಾ ಹೇಗೇ ? ಏಕೆಂದರೆ, ಇದು ಬಹಳ ಗಂಭೀರವಾದಂತಹ ಪ್ರಶ್ನೆಯಾಗಿದೆ.

ಅಧ್ಯಕ್ಷರು : ನೀವು ನಿಮ್ಮ questionಗೆ ಉತ್ತರ ಕೇಳುವವರೆಗೂ ಇದ್ದು ಮತ್ತೆ ನೀವು explain ಮಾಡಿದರೆ ಹೇಗೇ ?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : Reorganization Act, Parliamentನಲ್ಲಿ bill passಆಗಿ ಅದು ಮಾರ್ಚಿ 1ನೇ ತಾರೀಖಿಗೆ ಗೆಜೆಟ್ ಆಯಿತು. ಕರ್ನಾಟಕ ಸರ್ಕಾರವು ಅದನ್ನು ಈ ಬಗ್ಗೆ objection file ಮಾಡಿದ್ದಾರೆಯೇ ? ಇದನ್ನು repeal ಮಾಡಿ ಎಂದು ಕೇಳಿದ್ದಾರೆಯೇ ?

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ಮಾನ್ಯ ರಾಯರೆಡ್ಡಿಯವರು ಕೇಳಿರುವಂತಹ ಪ್ರಶ್ನೆಯೂ ಈ ಸಂದರ್ಭದಲ್ಲಿ ಉದ್ಭವಿಸುವುದಿಲ್ಲ. ಆ ಬಗ್ಗೆ ಬಹಳ ಸ್ಪಷ್ಟವಾಗಿ ಮಾಡಿಕೊಂಡು ಬಂದಿದ್ದಾರೆ. ಆದಾಗ್ಯೂ ಕೂಡ ಮುನ್ನೆಚ್ಚರಿಕೆಯಿಂದ ನಾವು ಅದನ್ನು ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ರಾಯರೆಡ್ಡಿಯವರೆ, I will tell you.

ಶ್ರೀ ವೈ.ಎಸ್.ವಿ.ದತ್ತ : ಏಕೆಂದರೆ, ಮಾನ್ಯ ನೀರಾವರಿ ಸಚಿವರು ಕೊಡುತ್ತಿರುವಂತಹ ಉತ್ತರವು ಎಲ್ಲೋ ಒಂದು ಕಡೆಯಲ್ಲಿ ನೀವು reorganization of Andhra, Telangana ಆದ ಮೇಲೆ between two successive states ಅಷ್ಟಕ್ಕೆ ಮಾತ್ರ ಸೀಮಿತವಾಗಿದೆ ನಮ್ಮ ರಾಜ್ಯಕ್ಕೆ ಏನೂ ತೊಂದರೆಯಿಲ್ಲ ಎನ್ನುವ ತರಹದಲ್ಲಿ ಉತ್ತರ ಇದೆ.

ಅಧ್ಯಕ್ಷರು : ಮಾನ್ಯ ಸಚಿವರು ಆ ರೀತಿಯಾಗಿ ಹೇಳಲಿಲ್ಲ.

ಶ್ರೀ ವೈ.ಎಸ್.ವಿ.ದತ್ತ : ಆ ರೀತಿ ಆಗುವುದಿಲ್ಲ. ಖಂಡಿತವಾಗಿಯೂ ಕೂಡ ಮಾರಕ ಮತ್ತು ಪ್ರೇರಕ ನಮ್ಮ ಮೇಲೆ ಆಗುತ್ತದೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರವು gazette notification ಮಾಡಬೇಕಾದರೆ ನಮ್ಮ ಸರ್ಕಾರವು ಏತಕ್ಕಾಗಿ objection ಅನ್ನು ಹಾಕಲಿಲ್ಲ ? ಏಕೆಂದರೆ ಅದು between two successive states ಅಲ್ಲವೇ?

ಅಧ್ಯಕ್ಷರು : ನೀವು ಆ question ಅನ್ನು ಕೇಳಲೇ ಇಲ್ಲ.

ಶ್ರೀ ವೈ.ಎಸ್.ವಿ.ದತ್ತ : ಅಧ್ಯಕ್ಷರೆ, ಅದು ಉಪ ಪ್ರಶ್ನೆ ಆಗಿದೆ.

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರೆ, ಆ ಪ್ರಶ್ನೆಯನ್ನು ಕೇಳಿಲ್ಲವೆಂದು ತಿಳಿದುಕೊಳ್ಳಬೇಡಿ, ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ ಎಂದು ಹೇಳುವುದಕ್ಕೆ ಕಾನೂನು ಪಂಡಿತರು ಇದ್ದಾರೆ. . . .

ಶ್ರೀ ಆರ್.ವಿ.ದೇಶಪಾಂಡೆ : ಈ ಪ್ರಶ್ನೆಯನ್ನು ಚರ್ಚೆ ಮಾಡುತ್ತಾ ಹೋದರೆ there is no end. ಹಾಗಾಗಿ ಅದನ್ನು ಮುಗಿಸಿ, Demand ನಲ್ಲಿ ಬಂದಾಗ ಈ ಬಗ್ಗೆ ಚರ್ಚೆ ಮಾಡಿ.

ಅಧ್ಯಕ್ಷರು : ಸಾಕು, ಇದನ್ನು ಚರ್ಚೆಗೆ ಹಾಕೋಣ, ಬಿಡಿ. ಈಗ ಮುಂದಿನ ಪ್ರಶ್ನೆ ತೆಗೆದುಕೊಳ್ಳೋಣ.

ಶ್ರೀ ವೈ.ಎಸ್.ವಿ.ದತ್ತಾ : ಅದರೊಳಗೆ ನೋಟಿಫಿಕೇಷನ್ ಅನ್ನು ಹೇಗೆ ಮಾಡಿದರು? ಬಿಜೆಪಿ ಸರ್ಕಾರ ಹೇಗೆ ಇದನ್ನು ಚರ್ಚೆ ಮಾಡಿತು?

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: Re-organization ಮಾಡಿದ್ದು ಬಿಜೆಪಿಯವರೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇದನ್ನು ನಾವು ಮಾಡಿದ್ದಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ಅಧ್ಯಕ್ಷರೆ, ಬಿಜೆಪಿಯವರ ಬಗ್ಗೆ ಮಾತನಾಡಿರುವ ಪದವನ್ನು ದಾಖಲೆಯಿಂದ ತೆಗೆಸಿ.

(ಗೊಂದಲ)

ಶ್ರೀ.ಸಿ.ಟಿ.ರವಿ : ದತ್ತಾರವರು ಬಿಜೆಪಿಯವರ ಬಗ್ಗೆ ಯಾವಾಗಲೂ ಹೀಗೆ ಮಾತನಾಡುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ : Highest law making body is parliament. ದತ್ತಾರವರು ಶ್ರೀಲಂಕಾಕ್ಕೆ ಹೋಗದಿರುವುದರಿಂದ ಈ ರೀತಿ ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಎಂಬ ಪದವನ್ನು ಕಡತದಿಂದ ತೆಗೆಯಲಾಗಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವೈ.ಎಸ್.ವಿ.ದತ್ತಾರವರು ಎಂದು ಹೇಳಿದ ಪದವನ್ನು ಮಾನ್ಯ ಸಭಾಧ್ಯಕ್ಷರು ಕಡತದಿಂದ ತೆಗೆದುಹಾಕುವಂತೆ ಸೂಚಿಸಿದರು)

ಅಧ್ಯಕ್ಷರು : ಮುಂದಿನ ಪ್ರಶ್ನೆ ವಿಶ್ವೇಶ್ವರ ಹೆಗಡೆ ಕಾಗೇರಿ ಕೇಳಿ

ಪ್ರಕೃತಿ ವಿಕೋಪ ಪರಿಹಾರ ನಿಧಿ

05(61) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ):– ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ರಾಜ್ಯ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿಗೆ (ಅತಿವೃಷ್ಟಿ) ಬಿಡುಗಡೆ ಮಾಡಿದ್ದ ಮೊತ್ತವೆಷ್ಟು ; (ಜಿಲ್ಲಾವಾರು ಬಿಡುಗಡೆ ಮಾಡಿದ ವಿವರ ನೀಡುವುದು)

(ಆ) ಕಳೆದ ವರ್ಷ ಇದಕ್ಕಾಗಿ ನಿಗದಿಪಡಿಸಿದ್ದ ಹಣವೆಷ್ಟು; ಮಂಜೂರಾದ ಹಣವೆಷ್ಟು; ಈ ಪೈಕಿ ಬಳಕೆಯಾಗಿರುವ ಮೊತ್ತವೆಷ್ಟು ;

(ಇ) ಹಿಂದಿನ ಅವಧಿಯ ಮೊತ್ತವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಅಂತಹ ಜಿಲ್ಲೆಗಳಾವುವು; ಬಳಕೆ ಮಾಡಿಕೊಂಡ ಜಿಲ್ಲೆಗಳ ಪೈಕಿ ಇದುವರೆಗೂ ಉಪಯೋಗ ಪ್ರಮಾಣ ಪತ್ರ ನೀಡದಿರುವ ಜಿಲ್ಲೆಗಳೆಷ್ಟು ; ಅವು ಯಾವುವು ;

(ಉ) ಸರ್ಕಾರ ನೀಡಿರುವ ಮೊತ್ತಕ್ಕೂ, ಬಳಕೆ ಮಾಡಿಕೊಂಡಿರುವ ಪ್ರಮಾಣಪತ್ರದ ಮೊತ್ತಕ್ಕೂ ವ್ಯತ್ಯಾಸಗಳಿರುವುದು ಕಂಡು ಬಂದಿದೆಯೇ ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;